ಮಾಡಿದ್ದಾರೆ. ಆದರೆ ಬಹಳಷ್ಟು ಜನ ಮಿತ್ರರು ವಿರೋಧ ಮಾಡುತ್ತಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ನಾನು ಇಲ್ಲಿ ಯಾರ ಹೆಸರುಗಳನ್ನೂ ಮೆನ್‌ಷನ್ ಮಾಡುವುದಿಲ್ಲ. ನಮ್ಮಲ್ಲಿ ನೂರಕ್ಕೆ 20-25ರಷ್ಟು ಜನ ಶಾಸಕರ ಮಕ್ಕಳು ಇವೊತ್ತು ಆರ್‌ಎಸ್‌ಎಸ್ ಇಲಾಖೆಗೆ ಹೋಗುತ್ತಾರೆ. ಇದನ್ನು ಯಾರೂ ನೇರವಾಗಿ ಒಪ್ಪಿಕೊಳ್ಳಲು ಇಷ್ಟಪಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಶಾಸಕರ ಮಕ್ಕಳ ಬಗ್ಗೆ ಏಕೆ ಮಾತನಾಡುತ್ತಿದ್ದೀರಿ? ಸುತ್ತೋಲೆ ಬಗ್ಗೆ ಮಾತನಾಡಿ...

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಬಹುತೇಕ ಶಾಸಕರು ಗುಜರಾತಿನಲ್ಲಿ ಭೂಕಂಪವಾದಾಗ ಆರ್‌ಎಸ್‌ಎಸ್ ನವರು ಮಾಡಿದ ಕೆಲಸಕಾರ್ಯಗಳನ್ನು ಪ್ರಶಂಸೆ ಮಾಡಲು ಮುಂದಾಗುವುದಿಲ್ಲ. ಅಸ್ಸಾಂನಲ್ಲಿ, ಪ್ರವಾಹವಾದಾಗ ಸಂಘದವರು ಮಾಡಿದ ಕೆಲಸ ಏನೆಂಬುದು ಇವರಿಗೆ ಗೊತ್ತು...

(ಗೊಂದಲ)

ನಾನು ಸುತ್ತೋಲೆಯಲ್ಲಿ ನಮೂದಿಸಲ್ಪಟ್ಟ ಒಂದು ವಾಕ್ಯವನ್ನು ಓದುತ್ತೇನೆ. "ಇವುಗಳಲ್ಲದೆ, ಆರ್‌ಎಸ್‌ಎಸ್, ಮುಸ್ಲಿಂಲೀಗ್, ಎಲ್‌ಟಿಟಿಇ. ....

(ಗೊಂದಲ)

ನನಗೆ ಮಾತನಾಡಲು ಅವಕಾಶ ಮಾಡಿಕೊಡಿ....

ಶ್ರೀ ಎಂ. ಶಿವಣ್ಣ : ಈ ಕಡೆಯಲ್ಲಿಯೂ ದಲಿತ ಶಾಸಕರಿದ್ದಾರೆ ಆದ್ಯಕ್ಷರೇ; ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

ಶ್ರೀ ಎ. ನಾರಾಯಣಸ್ವಾಮಿ : ಹೇಳಲಿ, ಘೋಷಣೆ ಮಾಡಲಿ, ನಾನು ಮಾತನಾಡುವುದಿಲ್ಲ, ಮಾತನಾಡಬೇಕಾದ ಜಾಗದಲ್ಲಿ ನಾನು ಮಾತನಾಡುತ್ತೇನೆ. ದಲಿತ ಸಂಘಟನೆ ಕಾನೂನುಬಾಹಿರ ಸಂಘಟನೆ, ದೇಶದ್ರೋಹಿ ಸಂಘಟನೆ ಅಂತ ಹೇಳಿ, ನಾನು ಇಲ್ಲಿ ಮಾತನಾಡುವುದಿಲ್ಲ, ಬೇರೆ ಕಡೆ ಮಾತನಾಡುತ್ತೇನೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಸ್ವಾಮಿ ಮಾನ್ಯ ಸುರೇಶ್ ಕುಮಾರ್ ರವರು ಹೇಳಿದರು, ಈ ದಿನದ ಸದನದ ಖರ್ಚು ವೆಚ್ಚವನ್ನು ಪೋಲೀಸರಿಂದ ವಸೂಲು ಮಾಡಬೇಕು ಅಂತ. ನಾವು ಹೇಳುತ್ತೇವೆ, ಆ ಎಲ್ಲಾ ಖರ್ಚನ್ನೂ ನೀವೆಲ್ಲರೂ ಸೇರಿ ಕೊಡಬೇಕಾಗುತ್ತದೆ.

ಶ್ರೀ ಎ. ನಾರಾಯಣಸ್ವಾಮಿ : ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಜೆಕೆಎಲ್‌ಎಫ್...

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿಯವರು : ಹಾಗೂ ಇತರ ಬಿಜೆಪಿ ಸದಸ್ಯರಿಂದ ಧರಣಿ.

(ಗೊಂದಲ)

ಅಧ್ಯಕ್ಷರು : ಮಾತನಾಡಲು ಅವಕಾಶ ಕೊಟ್ಟಿದ್ದೇನೆ. do not say like that, I have permitted him to speak ಅದೇ ಕೆಲಸವಾಗಿ ಕೊನೆಯಲ್ಲಿ ಎರಡು ನಿಮಿಷ ಅಂತ ಹೇಳಿದ್ದೇನೆ. ಮಾತನಾಡದೆ ನೀವೇ ಗಲಾಟೆ ಮಾಡಿಕೊಂಡರೆ ಹೇಗೆ? I have permitted